# <u>ಕರ್ನಾಟಕ ವಿಧಾನ ಪರಿಷತ್ತು</u>

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 584
2. ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜು (ಸಂದೇಶ್ ನಾಗರಾಜು)
3. ಉತ್ತರಿಸಬೇಕಾದ ದಿನಾಂಕ : 24-09-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಸುಪ್ರಸಿದ್ಧ ಕೃಷ್ಣರಾಜಸಾಗರದ ಬೃಂದಾವನ ಉದ್ಯಾನವನವನ್ನು ವಿಶ್ವದರ್ಜೆಗೇರಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆಯೇ; ಈ ಬಗ್ಗೆ ಯೋಜನೆ ಹಾಗೂ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆಯೇ;</td><td>ಕೃಷ್ಣರಾಜಸಾಗರದ ಬೃಂದಾವನ ಉದ್ಯಾನವನವನ್ನು ವಿಶ್ವದರ್ಜೆಗೇರಿಸುವ ಯೋಜನೆಯನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ (ಪಿ.ಪಿ.ಪಿ ಮಾದರಿಯಲ್ಲಿ) ಕೈಗೆತ್ತಿಕೊಳ್ಳಲು ಯೋಜನೆಯ ರೂಪರೇಷೆಗಳನ್ನೊಳಗೊಂಡ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದ್ದು, ಅನುಮೋದನಾ ಪ್ರಕ್ರಿಯೆ ಜಾರಿಯಲ್ಲಿದೆ.</td></tr>
<tr><td>ಆ</td><td>ಈ ಉದ್ಯಾನವನದ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಸ್ತುತ ಯಾವ ಯಾವ ಕಾಮಗಾರಿಗಳು ಚಾಲನೆಯಲ್ಲಿವೆ; ಬೃಂದಾನವನ ಉದ್ಯಾನವನದ ವಾಹನ ನಿಲುಗಡೆ ಸ್ಥಳವನ್ನು ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ;</td><td>ಪ್ರಸ್ತುತ ಯಾವುದೇ ಅಭಿವೃದ್ಧಿ ಕಾಮಗಾರಿಗಳು ಚಾಲನೆಯಲ್ಲಿರುವುದಿಲ್ಲ.<br>ಬೃಂದಾವನ ಉದ್ಯಾನವನವನ್ನು ಪಿ.ಪಿ.ಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಸಿದ್ಧಪಡಿಸಿರುವ ಯೋಜನಾ ವರದಿಯಲ್ಲಿ ವಾಹನ ನಿಲುಗಡೆ ಸ್ಥಳವನ್ನು ಅಭಿವೃದ್ಧಿಪಡಿಸುವುದೂ ಒಳಗೊಂಡಿರುತ್ತದೆ.</td></tr>
<tr><td>ಇ</td><td>ಬೃಂದಾವನ ಉದ್ಯಾನವನ ವೀಕ್ಷಣೆಗೆ ಆಗಮಿಸುವ ಹಾಗೂ ಈ ರಸ್ತೆಯಲ್ಲಿ ಮುಂದೆ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿಗೆ, ಕೃಷ್ಣರಾಜಪೇಟೆ ತಾಲ್ಲೂಕಿನ ಬೂಕಿನಕೆರೆ, ವರಾಹನಾಥ ಕಲ್ಲಹಳ್ಳಿ ಕಡೆಗೆ ಹೋಗುವ ವಾಹನಗಳು ಕೃಷ್ಣರಾಜಸಾಗರ ಜಲಾಶಯದ ಹಿಂದೆ ಇರುವ ಸೇತುವೆಯನ್ನು ಹಾದು ಹೋಗಲು ವಾಹನ ಶುಲ್ಕವನ್ನು ಕಟ್ಟಬೇಕಾಗಿದೆಯೇ; ನಿಗದಿಪಡಿಸಿರುವ ವಾಹನ ಶುಲ್ಕಎಷ್ಟು?</td><td>ಸೇತುವೆಯನ್ನು ಹಾದು ಹೋಗಲು ವಾಹನ ಶುಲ್ಕವನ್ನು ಕಟ್ಟಬೇಕಾಗಿರುತ್ತದೆ. ಪ್ರಸ್ತುತ ನಿಗಧಿಪಡಿಸಿ ವಸೂಲು ಮಾಡುತ್ತಿರುವ ವಾಹನ ಶುಲ್ಕದ ವಿವರಗಳು ಈ ಕೆಳಕಂಡಂತಿದೆ:
<table>
<tr><th>ಕ್ರ ಸಂ</th><th>ವಾಹನ ವಿವರ</th><th>ಪರಿಷ್ಕೃತ ದರ ರೂ.ಗಳಲ್ಲಿ (ಜಿ.ಎಸ್.ಟಿ. ಸೇರಿ)</th></tr>
<tr><td>1</td><td>ಕಾರು, ಸುಮೋ, ಕ್ವಾಲೀಸ್</td><td>50.00</td></tr>
<tr><td>2</td><td>ಮಿನಿ ಬಸ್</td><td>70.00</td></tr>
<tr><td>3</td><td>ಬಸ್ಸು</td><td>100.00</td></tr>
<tr><td>4.</td><td>ತ್ರಿಚಕ್ರ ವಾಹನ</td><td>20.00</td></tr>
<tr><td>5</td><td>ಲಾರಿ</td><td>150.00</td></tr>
<tr><td>6</td><td>ಲಾರಿ (6 ಚಕ್ರ)</td><td>200.00</td></tr>
<tr><td>7</td><td>ಲಾರಿ (10 ಚಕ್ರ)</td><td>200.00</td></tr>
</table></td></tr>
</table>

***<u>ಸಂಖ್ಯೆ:ಜಸಂಇ 117 ಎನ್‌ಎಲ್‌ಎ 2020</u>***

**(ರಮೇಶ್ ಲ. ಜಾರಕಿಹೊಳಿ)**
**ಜಲಸಂಪನ್ಮೂಲ ಸಚಿವರು**